رئاسة الشؤون الدينية
بالمسجد الحرام والمسجد النبوي

بَيَانُ كُفْرِ وَضَلَالِ مَنْ زَعَمَ أَنَّهُ يَجُوزُ لِأَحَدٍ الخُرُوجُ مِنْ شَرِيعَةِ مُحَمَّدٍ ﷺ

ಕನ್ನಡ

كنادي

# ಮುಹಮ್ಮದ್ (ಸ) ರವರ ಶರಿಯತ್‌ನಿಂದ ಹೊರಗುಳಿಯಲು ಯಾರಿಗಾದರೂ ಅನುಮತಿಯಿದೆ ಎಂದು ವಾದಿಸುವವರ ಸತ್ಯನಿಷೇಧ ಮತ್ತು ದುರ್ಮಾರ್ಗದ ವಿವರಣೆ

ಲೇಖಕರು: ಗೌರವಾನ್ವಿತ ಶೈಖ್
ಅಬ್ದುಲ್ ಅಝೀಝ್ ಬಿನ್ ಅಬ್ದುಲ್ಲಾ ಬಿನ್ ಬಾಝ್

ⓒ **جمعية خدمة المحتوى الإسلامي باللغات ، ١٤٤٧هـ**

بن باز ، عبدالعزيز
بيان كفر وضلال من زعم أنه يجوز لأحد الخروج من شريعة محمد صلى الله عليه وسلم- كنادي. / عبدالعزيز بن باز ؛ جمعية خدمة المحتوى الإسلامي باللغات - ط١. .- الرياض ، ١٤٤٧هـ
٢٢ ص ؛ ..سم

**رقم الإيداع: ١٤٤٧/١٨٠٢٤**
**ردمك: ٥-٢٧٤-٥١٧-٦٠٣-٩٧٨**

# بَيَانُ كُفْرِ وَضَلَالِ مَنْ زَعَمَ أَنَّهُ يَجُوزُ لِأَحَدٍ الخُرُوجُ مِنْ شَرِيعَةِ مُحَمَّدٍ ﷺ

# ಮುಹಮ್ಮದ್ (ಸ) ರವರ ಶರಿಯತ್‌ನಿಂದ ಹೊರಗುಳಿಯಲು ಯಾರಿಗಾದರೂ ಅನುಮತಿಯಿದೆ ಎಂದು ವಾದಿಸುವವರ ಸತ್ಯನಿಷೇಧ ಮತ್ತು ದುರ್ಮಾರ್ಗದ ವಿವರಣೆ


لِسَمَاحَةِ الشَّيْخِ العَلَّامَةِ

عَبْدِ العَزِيزِ بْنِ عَبْدِ اللهِ بْنِ بَازٍ

رَحِمَهُ اللهُ

ಲೇಖಕರು: ಗೌರವಾನ್ವಿತ ಶೈಖ್

ಅಬ್ದುಲ್ ಅಝೀಝ್ ಬಿನ್ ಅಬ್ದುಲ್ಲಾ ಬಿನ್ ಬಾಝ್

بِسْمِ اللهِ الرَّحمَنِ الرَّحِيمِ

# ಹನ್ನೆರಡನೆಯ ಸಂದೇಶ: ಮುಹಮ್ಮದ್ (ಸ) ರವರ ಶರಿಯತ್‌ನಿಂದ ಹೊರಗುಳಿಯಲು ಯಾರಿಗಾದರೂ ಅನುಮತಿಯಿದೆ ಎಂದು ವಾದಿಸುವವರ ಸತ್ಯನಿಷೇಧ ಮತ್ತು ದುರ್ಮಾರ್ಗದ ವಿವರಣೆ

ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ ಸರ್ವಸ್ತುತಿ. ಪ್ರವಾದಿಗಳ ಮತ್ತು ಸಂದೇಶವಾಹಕರ ಮುದ್ರೆಯಾದ ನಮ್ಮ ಪ್ರವಾದಿ ಮುಹಮ್ಮದ್ (ಸ) ರವರ ಮೇಲೆ, ಅವರ ಕುಟುಂಬ ಮತ್ತು ಎಲ್ಲಾ ಸಹಚರರರ ಮೇಲೆ ಶಾಂತಿ ಮತ್ತು ಆಶೀರ್ವಾದಗಳು ವರ್ಷಿಸಲಿ.

ಇನ್ನು ವಿಷಯಕ್ಕೆ ಬರುವುದಾದರೆ: ಹಿಜರಿ 5/6/1415 ದಿನಾಂಕದ "ಅಶ್ಶರ್ಕುಲ್-ಅವ್ಸತ್" ಪತ್ರಿಕೆಯ ಸಂಚಿಕೆ ಸಂಖ್ಯೆ (5824) ರಲ್ಲಿ ಪ್ರಕಟವಾದ ಲೇಖನವನ್ನು ನೋಡಿದೆನು. ಅದನ್ನು ಅಬ್ದುಲ್ ಫತ್ತಾಹ್ ಅಲ್-ಹಾಯಿಕ್ ಎಂಬ ಹೆಸರಿನಿಂದ ಬರೆಯಲಾಗಿದ್ದು, ಅದರ ಶೀರ್ಷಿಕೆ "ತಪ್ಪುಕಲ್ಪನೆ" ಎಂದಿದೆ.

ಪ್ರವಾದಿ ಮುಹಮ್ಮದ್ (ಸ) ರವರ ಸಂದೇಶವು ಸಂಪೂರ್ಣ ಮನುಕುಲಕ್ಕಿರುವ ಸಂದೇಶವಾಗಿದೆಯೆಂದು ಇಸ್ಲಾಂ ಧರ್ಮದಿಂದ

ಮತ್ತು ಪವಿತ್ರ ಗ್ರಂಥಗಳ ಹಾಗೂ ವಿದ್ವಾಂಸರ ಒಮ್ಮತದಿಂದ ಖಚಿತವಾಗಿ ತಿಳಿದುಬಂದಿರುವ ವಿಷಯವನ್ನು ನಿರಾಕರಿಸುವುದು ಮತ್ತು ಮುಹಮ್ಮದ್ (ಸ) ರನ್ನು ಅನುಸರಿಸದೆ, ಅವರಿಗೆ ವಿಧೇಯರಾಗದೆ, ಯಹೂದಿ ಅಥವಾ ಕ್ರಿಶ್ಚಿಯನ್ ಆಗಿ ಉಳಿಯುವವರು ಸತ್ಯ ಧರ್ಮದ ಮೇಲೆ ಇದ್ದಾರೆ ಎಂದು ವಾದಿಸುವುದು ಲೇಖನದ ಸಾರಾಂಶವಾಗಿದೆ. ನಂತರ ಅದರಲ್ಲಿ ಅಲ್ಲಾಹು ಸತ್ಯನಿಷೇಧಿಗಳನ್ನು ಮತ್ತು ಪಾಪಿಗಳನ್ನು ಶಿಕ್ಷಿಸುವ ಅವನ ವಿವೇಕವನ್ನು ಪ್ರಶ್ನಿಸಿ, ಅದನ್ನು ವ್ಯರ್ಥವೆಂದು ಸಾರಲಾಗಿದೆ.

ತಮ್ಮ ಮಾತುಗಳಿಂದ ಅಜ್ಞಾನಿಗಳು ಮೋಸಹೋಗಲೆಂದು ಅವರು (ಲೇಖಕರು) ಧಾರ್ಮಿಕ ಗ್ರಂಥಗಳನ್ನು ತಿರುಚಿದ್ದಾರೆ, ಅವುಗಳನ್ನು ಅಸಾಂದರ್ಭಿಕವಾಗಿ ಉಲ್ಲೇಖಿಸಿದ್ದಾರೆ, ಅವುಗಳನ್ನು ತಮ್ಮ ಇಷ್ಟದಂತೆ ವ್ಯಾಖ್ಯಾನಿಸಿದ್ದಾರೆ ಮತ್ತು ಮುಹಮ್ಮದ್ (ಸ) ಅವರ ಸಂದೇಶದ ಸಾರ್ವತ್ರಿಕತೆಯನ್ನು—ಅವರ ಬಗ್ಗೆ ಕೇಳಿಯೂ ಅವರನ್ನು ಅನುಸರಿಸದವರ ಸತ್ಯನಿಷೇಧವನ್ನು ಮತ್ತು ಅಲ್ಲಾಹು ಇಸ್ಲಾಂ ಹೊರತುಪಡಿಸಿ ಬೇರೆ ಯಾವುದೇ ಧರ್ಮವನ್ನು ಸ್ವೀಕರಿಸುವುದಿಲ್ಲ ಎಂಬುದನ್ನು ಸೂಚಿಸುವ ಸ್ಪಷ್ಟವಾದ ಧಾರ್ಮಿಕ ಪುರಾವೆಗಳು ಮತ್ತು ಪಠ್ಯಗಳನ್ನು ನಿರ್ಲಕ್ಷಿಸಿದ್ದಾರೆ. ಅವರು ಸ್ಪಷ್ಟವಾದ ಸತ್ಯನಿಷೇಧ, ಧರ್ಮಪರಿತ್ಯಾಗ ಮತ್ತು ಅಲ್ಲಾಹು ಮತ್ತು ಅವನ

ಸಂದೇಶವಾಹಕರನ್ನು (ಸ) ನಿಷೇಧಿಸುವುದನ್ನು ಮಾಡಿದ್ದಾರೆ. ಲೇಖನವನ್ನು ಓದುವ ವಿದ್ವಾಂಸರು ಮತ್ತು ಸತ್ಯವಿಶ್ವಾಸಿಗಳಿಗೆ ಇದು ಖಂಡಿತ ಮನವರಿಕೆಯಾಗುವುದು.

ಅವರನ್ನು (ಲೇಖಕರನ್ನು) ನ್ಯಾಯಾಲಯಕ್ಕೆ ಹಾಜರುಪಡಿಸಿ, ಪಶ್ಚಾತ್ತಾಪ ಪಡಲು ಅವಕಾಶ ನೀಡಿ, ಅವರ ವಿಷಯದಲ್ಲಿ ಪರಿಶುದ್ಧ ಶರಿಯತ್ ಪ್ರಕಾರ ತೀರ್ಪು ನೀಡುವುದು ಆಡಳಿತಗಾರರ ಕರ್ತವ್ಯವಾಗಿದೆ.

ಮುಹಮ್ಮದ್ (ಸ) ರವರ ಸಂದೇಶದ ಸಾರ್ವತ್ರಿಕತೆಯನ್ನು ಮತ್ತು ಎಲ್ಲಾ ಜಿನ್ನ್ ಹಾಗೂ ಮಾನವರು ಅವರನ್ನು ಅನುಸರಿಸಬೇಕೆಂಬ ಕಡ್ಡಾಯತೆಯನ್ನು ಅಲ್ಲಾಹು ಸ್ಪಷ್ಟಪಡಿಸಿದ್ದಾನೆ. ಮುಸ್ಲಿಮರಲ್ಲಿ ಕನಿಷ್ಠ ಜ್ಞಾನವುಳ್ಳವರಿಗೂ ಕೂಡ ಇದು ತಿಳಿಯದ ವಿಷಯವಲ್ಲ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿قُلْ يَـٰٓأَيُّهَا ٱلنَّاسُ إِنِّى رَسُولُ ٱللَّهِ إِلَيْكُمْ جَمِيعًا ٱلَّذِى لَهُۥ مُلْكُ ٱلسَّمَـٰوَٰتِ وَٱلْأَرْضِ ۖ لَآ إِلَـٰهَ إِلَّا هُوَ يُحْىِۦ وَيُمِيتُ ۖ فَـَٔامِنُوا۟ بِٱللَّهِ وَرَسُولِهِ ٱلنَّبِىِّ ٱلْأُمِّىِّ ٱلَّذِى يُؤْمِنُ بِٱللَّهِ وَكَلِمَـٰتِهِۦ وَٱتَّبِعُوهُ لَعَلَّكُمْ تَهْتَدُونَ ١٥٨﴾

ಹೇಳಿರಿ: "ಓ ಮನುಷ್ಯರೇ! ನಿಶ್ಚಯವಾಗಿಯೂ ನಾನು ನಿಮ್ಮೆಲ್ಲರ ಬಳಿಗೆ (ಕಳುಹಿಸಲಾದ) ಅಲ್ಲಾಹನ ಸಂದೇಶವಾಹಕನಾಗಿದ್ದೇನೆ. ಅಂದರೆ, ಭೂಮ್ಯಾಕಾಶಗಳ ಆಧಿಪತ್ಯವು ಯಾರಿಗೆ ಸೇರಿದ್ದೋ ಅವನ (ಸಂದೇಶವಾಹಕ). ಅವನ ಹೊರತು

ಆರಾಧನೆಗೆ ಅರ್ಹರಾದ ಅನ್ಯ ದೇವರಿಲ್ಲ. ಅವನು ಜೀವ ಮತ್ತು ಮರಣವನ್ನು ನೀಡುತ್ತಾನೆ." ಆದ್ದರಿಂದ ನೀವು ಅಲ್ಲಾಹನಲ್ಲಿ ಮತ್ತು ಅವನ ಸಂದೇಶವಾಹಕರಲ್ಲಿ—ಅಂದರೆ ಅಲ್ಲಾಹನಲ್ಲಿ ಮತ್ತು ಅವನ ವಚನಗಳಲ್ಲಿ ವಿಶ್ವಾಸವಿಡುವ ಆ ಅನಕ್ಷರಸ್ಥ ಪ್ರವಾದಿಯಲ್ಲಿ ವಿಶ್ವಾಸವಿಟ್ಟು ಅವರನ್ನು ಅನುಸರಿಸಿರಿ. ನೀವು ಸನ್ಮಾರ್ಗ ಪಡೆಯುವುದಕ್ಕಾಗಿ. [ಅಲ್-ಅಅರಾಫ್: 158]. ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿...وَأُوحِيَ إِلَيَّ هَٰذَا ٱلْقُرْءَانُ لِأُنذِرَكُم بِهِۦ وَمَنۢ بَلَغَ...﴾

ಈ ಕುರ್‌ಆನಿನ ಮೂಲಕ ನಿಮಗೆ ಮತ್ತು ಇದು ತಲುಪುವ ಎಲ್ಲರಿಗೂ ಮುನ್ನೆಚ್ಚರಿಕೆ ನೀಡಲು ನನಗೆ ಈ ಕುರ್‌ಆನನ್ನು ದೇವವಾಣಿಯಾಗಿ ನೀಡಲಾಗಿದೆ. [ಅಲ್-ಅನ್‌ಆಮ್: 19] ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿قُلْ إِن كُنتُمْ تُحِبُّونَ ٱللَّهَ فَٱتَّبِعُونِى يُحْبِبْكُمُ ٱللَّهُ وَيَغْفِرْ لَكُمْ ذُنُوبَكُمْ ۗ وَٱللَّهُ غَفُورٌ رَّحِيمٌ ٣١﴾

ಹೇಳಿರಿ: "ನೀವು ಅಲ್ಲಾಹನನ್ನು ಪ್ರೀತಿಸುವುದಾದರೆ ನನ್ನನ್ನು ಅನುಸರಿಸಿರಿ. ಅಲ್ಲಾಹು ನಿಮ್ಮನ್ನು ಪ್ರೀತಿಸುತ್ತಾನೆ ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುತ್ತಾನೆ. ಅಲ್ಲಾಹು ಕ್ಷಮಿಸುವವನು ಮತ್ತು ದಯೆ ತೋರುವವನಾಗಿದ್ದಾನೆ."

[ಆಲು ಇಮ್ರಾನ್: 31].

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿وَمَن يَبۡتَغِ غَيۡرَ ٱلۡإِسۡلَٰمِ دِينٗا فَلَن يُقۡبَلَ مِنۡهُ وَهُوَ فِي ٱلۡأٓخِرَةِ مِنَ ٱلۡخَٰسِرِينَ ٨٥﴾

ಯಾರು ಇಸ್ಲಾಂ ಅಲ್ಲದ ಬೇರೊಂದು ಧರ್ಮವನ್ನು ಹುಡುಕುತ್ತಾನೋ—ಅವನಿಂದ ಅದನ್ನು ಎಂದಿಗೂ ಸ್ವೀಕರಿಸಲಾಗುವುದಿಲ್ಲ. ಪರಲೋಕದಲ್ಲಿ ಅವನು ನಷ್ಟ ಹೊಂದಿದವರಲ್ಲಿ ಸೇರುವನು. [ಆಲು ಇಮ್ರಾನ್: 85]. ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿وَمَآ أَرۡسَلۡنَٰكَ إِلَّا كَآفَّةٗ لِّلنَّاسِ بَشِيرٗا وَنَذِيرٗا...﴾

ನಾವು ನಿಮ್ಮನ್ನು ಸಂಪೂರ್ಣ ಮನುಕುಲಕ್ಕೆ ಸುವಾರ್ತೆ ತಿಳಿಸಲು ಮತ್ತು ಮುನ್ನೆಚ್ಚರಿಕೆ ನೀಡಲು ಕಳುಹಿಸಿದ್ದೇವೆ... [ಸಬಅ:28] ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿وَمَآ أَرۡسَلۡنَٰكَ إِلَّا رَحۡمَةٗ لِّلۡعَٰلَمِينَ ١٠٧﴾

(ಪ್ರವಾದಿಯವರೇ) ನಾವು ನಿಮ್ಮನ್ನು ಸರ್ವಲೋಕದವರಿಗೆ ಒಂದು ದಯೆಯಾಗಿಯೇ ಕಳುಹಿಸಿದ್ದೇವೆ. [ಅಲ್-ಅಂಬಿಯಾ:107] ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿...وَقُل لِّلَّذِينَ أُوتُواْ ٱلۡكِتَٰبَ وَٱلۡأُمِّيِّـۧنَ ءَأَسۡلَمۡتُمۡۚ فَإِنۡ أَسۡلَمُواْ فَقَدِ ٱهۡتَدَواْۖ وَّإِن تَوَلَّوۡاْ فَإِنَّمَا عَلَيۡكَ ٱلۡبَلَٰغُۗ وَٱللَّهُ بَصِيرُۢ بِٱلۡعِبَادِ﴾

ಗ್ರಂಥ ನೀಡಲಾದವರೊಂದಿಗೆ ಮತ್ತು

ಅನಕ್ಷರಸ್ಥರೊಂದಿಗೆ (ಅರಬ್ ಬಹುದೇವಾರಾಧಕರೊಂದಿಗೆ) ಕೇಳಿರಿ: "ನೀವು ಶರಣಾಗಿದ್ದೀರಾ?" ಅವರು ಶರಣಾದರೆ ಅವರು ಸನ್ಮಾರ್ಗವನ್ನು ಪಡೆಯುತ್ತಾರೆ. ಆದರೆ ಅವರು ಮುಖ ತಿರುಗಿಸಿ ನಡೆದರೆ ನಿಮ್ಮ ಕರ್ತವ್ಯವು ಅವರಿಗೆ ಸಂದೇಶವನ್ನು ತಲುಪಿಸಿಕೊಡುವುದು ಮಾತ್ರ. ಅಲ್ಲಾಹು ತನ್ನ ದಾಸರನ್ನು ನೋಡುತ್ತಿದ್ದಾನೆ.

[ಆಲು ಇಮ್ರಾನ್: 20]. ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿تَبَارَكَ ٱلَّذِى نَزَّلَ ٱلْفُرْقَانَ عَلَىٰ عَبْدِهِۦ لِيَكُونَ لِلْعَٰلَمِينَ نَذِيرًا﴾

ಸತ್ಯಾಸತ್ಯ ವಿವೇಚಕ ಗ್ರಂಥವನ್ನು (ಕುರ್‌ಆನನ್ನು) ತನ್ನ ದಾಸನಿಗೆ (ಪ್ರವಾದಿಗೆ)—ಅವರು ಸರ್ವಲೋಕದವರಿಗೆ ಒಬ್ಬ ಮುನ್ನೆಚ್ಚರಿಕೆಗಾರನಾಗಲೆಂದು—ಅವತೀರ್ಣಗೊಳಿಸಿದ ಅಲ್ಲಾಹು ಸಮೃದ್ಧಪೂರ್ಣನಾಗಿದ್ದಾನೆ. [ಅಲ್-ಫುರ್ಕಾನ್: 1].

ಬುಖಾರಿ ಮತ್ತು ಮುಸ್ಲಿಂ ಜಾಬಿರ್ (ರ) ರಿಂದ ವರದಿ. ಪ್ರವಾದಿ (ಸ) ರವರು ಹೇಳಿದರು:

«أُعْطِيتُ خَمْسًا لَمْ يُعْطَهُنَّ أَحَدٌ قَبْلِي: نُصِرْتُ بِالرُّعْبِ مَسِيرَةَ شَهْرٍ، وَجُعِلَتْ لِيَ الْأَرْضُ مَسْجِدًا وَطَهُورًا، فَأَيُّمَا رَجُلٍ مِنْ أُمَّتِي أَدْرَكَتْهُ الصَّلَاةُ، فَلْيُصَلِّ، وَأُحِلَّتْ لِيَ الْمَغَانِمُ، وَلَمْ تُحَلَّ لِأَحَدٍ قَبْلِي، وَأُعْطِيتُ الشَّفَاعَةَ، وَكَانَ النَّبِيُّ يُبْعَثُ إِلَى قَوْمِهِ خَاصَّةً، وَبُعِثْتُ إِلَى النَّاسِ عَامَّةً».

"ನನಗೆ ಐದು ವಿಷಯಗಳನ್ನು ನೀಡಲಾಗಿದೆ,

ನನಗಿಂತ ಮೊದಲು ಯಾರಿಗೂ ಅವುಗಳನ್ನು ನೀಡಲಾಗಿಲ್ಲ: ಒಂದು ತಿಂಗಳ ಪ್ರಯಾಣದ ದೂರದವರೆಗೆ (ಶತ್ರುಗಳ ಹೃದಯದಲ್ಲಿ) ಭಯವನ್ನು ಬಿತ್ತುವ ಮೂಲಕ ನನಗೆ ಸಹಾಯವನ್ನು ನೀಡಲಾಗಿದೆ. ಭೂಮಿಯನ್ನು ನನಗೆ (ಮತ್ತು ನನ್ನ ಅನುಯಾಯಿಗಳಿಗೆ) ನಮಾಝಿನ ಸ್ಥಳವಾಗಿ ಮತ್ತು ತಯಮ್ಮುಮ್ ಮಾಡುವ ವಸ್ತುವನ್ನಾಗಿ ಮಾಡಲಾಗಿದೆ—ಆದ್ದರಿಂದ ನನ್ನ ಅನುಯಾಯಿಗಳಲ್ಲಿ ಯಾರಿಗಾದರೂ ನಮಾಝಿನ ಸಮಯವಾದಾಗ ಅವರು ನಮಾಝ್ ಮಾಡಲಿ. ಯುದ್ಧದ ಸಂಪತ್ತನ್ನು ನನಗೆ ಧರ್ಮಬದ್ಧಗೊಳಿಸಲಾಗಿದೆ—ಆದರೆ ನನಗಿಂತ ಮೊದಲು ಯಾರಿಗೂ ಅದು ಧರ್ಮಬದ್ಧವಾಗಿರಲಿಲ್ಲ. ನನಗೆ ಶಫಾಅತ್ (ಪುನರುತ್ಥಾನ ದಿನದಂದು ಶಿಫಾರಸ್ಸು) ಮಾಡುವ ಅಧಿಕಾರವನ್ನು ನೀಡಲಾಗಿದೆ. ಪ್ರತಿಯೊಬ್ಬ ಪ್ರವಾದಿಯನ್ನು ಅವರ ಜನಾಂಗಕ್ಕೆ ಮಾತ್ರ ಕಳುಹಿಸಲಾಗುತ್ತಿತ್ತು, ಆದರೆ ನನ್ನನ್ನು ಸರ್ವ ಮಾನವಕುಲಕ್ಕೆ ಕಳುಹಿಸಲಾಗಿದೆ."

ನಮ್ಮ ಪ್ರವಾದಿ ಮುಹಮ್ಮದ್ (ಸ) ರವರ ಸಂದೇಶವು ಸರ್ವ ಮಾನವಕುಲಕ್ಕಿರುವ ಸಾರ್ವತ್ರಿಕ ಮತ್ತು ಸಮಗ್ರ ಸಂದೇಶವಾಗಿದೆ ಎಂಬುದಕ್ಕೆ ಮತ್ತು ಅದು ಹಿಂದಿನ ಎಲ್ಲಾ ಧರ್ಮಶಾಸ್ತ್ರಗಳನ್ನು ರದ್ದುಗೊಳಿಸಿದೆ ಎಂಬುದಕ್ಕೆ ಇವೆಲ್ಲವೂ ಸ್ಪಷ್ಟವಾದ ಪುರಾವೆಯಾಗಿವೆ. ಮುಹಮ್ಮದ್ (ಸ) ರನ್ನು

ಅನುಸರಿಸದವರು ಮತ್ತು ಅವರಿಗೆ ವಿಧೇಯರಾಗದವರು ಸತ್ಯನಿಷೇಧಿ ಮತ್ತು ಪಾಪಿಗಳಾಗಿದ್ದು, ಅವರು ಅಲ್ಲಾಹನ ಶಿಕ್ಷೆಗೆ ಅರ್ಹರಾಗಿದ್ದಾರೆ. ಅಲ್ಲಾಹು ಹೇಳುತ್ತಾನೆ:

﴿...وَمَن يَكۡفُرۡ بِهِۦ مِنَ ٱلۡأَحۡزَابِ فَٱلنَّارُ مَوۡعِدُهُۥۚ...﴾

ವಿವಿಧ ಪಂಗಡಗಳಲ್ಲಿ ಯಾರು ಅದನ್ನು ನಿಷೇಧಿಸುತ್ತಾರೋ ಅವರಿಗೆ ವಾಗ್ದಾನ ಮಾಡಲಾದ ಸ್ಥಳವು ನರಕಾಗ್ನಿಯಾಗಿದೆ. [ಹೂದ್: 17]. ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿...فَلۡيَحۡذَرِ ٱلَّذِينَ يُخَالِفُونَ عَنۡ أَمۡرِهِۦٓ أَن تُصِيبَهُمۡ فِتۡنَةٌ أَوۡ يُصِيبَهُمۡ عَذَابٌ أَلِيمٌ﴾

ಪ್ರವಾದಿಯವರ ಆಜ್ಞೆಗೆ ವಿರುದ್ಧವಾಗಿ ಸಾಗುವವರು—ಅವರಿಗೇನಾದರೂ ಅನಾಹುತ ಸಂಭವಿಸುವುದರ ಬಗ್ಗೆ ಅಥವಾ ಯಾತನಾಮಯ ಶಿಕ್ಷೆ ಎರಗುವುದರ ಬಗ್ಗೆ ಸದಾ ಭಯಪಡುತ್ತಿರಲಿ. [ಅನ್ನೂರ್: 63] ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿وَمَن يَعۡصِ ٱللَّهَ وَرَسُولَهُۥ وَيَتَعَدَّ حُدُودَهُۥ يُدۡخِلۡهُ نَارًا خَٰلِدًا فِيهَا وَلَهُۥ عَذَابٌ مُّهِينٌ ١٤﴾

ಯಾರು ಅಲ್ಲಾಹನಿಗೆ ಮತ್ತು ಅವನ ಸಂದೇಶವಾಹಕರಿಗೆ ಅವಿಧೇಯತೆ ತೋರುತ್ತಾನೋ ಮತ್ತು ಅವನ ಎಲ್ಲೆಗಳನ್ನು ಮೀರುತ್ತಾನೋ—

ಅವನನ್ನು ಅಲ್ಲಾಹು ನರಕಾಗ್ನಿಗೆ ಪ್ರವೇಶ ಮಾಡಿಸುವನು. ಅವನು ಅದರಲ್ಲಿ ಶಾಶ್ವತವಾಗಿ ವಾಸಿಸುವನು. ಅವನಿಗೆ ಅಪಮಾನಕರ ಶಿಕ್ಷೆಯಿದೆ. [ಅನ್ನಿಸಾ: 14]. ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿...وَمَن يَتَبَدَّلِ ٱلۡكُفۡرَ بِٱلۡإِيمَٰنِ فَقَدۡ ضَلَّ سَوَآءَ ٱلسَّبِيلِ﴾

ಯಾರು ಸತ್ಯವಿಶ್ವಾಸವನ್ನು ಸತ್ಯನಿಷೇಧಕ್ಕೆ ಬದಲಾಯಿಸುತ್ತಾನೋ ಅವನು ನೇರ ಮಾರ್ಗದಿಂದ ತಪ್ಪಿ ಹೋಗುತ್ತಾನೆ. [ಅಲ್-ಬಕರ: 108] ಈ ಅರ್ಥದಲ್ಲಿ ಇನ್ನೂ ಅನೇಕ ವಚನಗಳಿವೆ.

ಸಂದೇಶವಾಹಕರ (ಸ) ವಿಧೇಯತೆಯನ್ನು ಅಲ್ಲಾಹು ತನ್ನ ವಿಧೇಯತೆಗೆ ಜೋಡಿಸಿದ್ದಾನೆ. ಇಸ್ಲಾಂ ಹೊರತುಪಡಿಸಿ ಬೇರೆ ಧರ್ಮದಲ್ಲಿ ನಂಬಿಕೆಯಿಡುವವನು ನಷ್ಟ ಅನುಭವಿಸುವನು ಹಾಗೂ ಅವನಿಂದ ಯಾವುದೇ ದಂಡ ಅಥವಾ ಪ್ರಾಯಶ್ಚಿತ್ತವನ್ನು ಸ್ವೀಕರಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾನೆ. ಅವನು ಹೇಳುತ್ತಾನೆ:

﴿وَمَنْ يَبْتَغِ غَيْرَ الْإِسْلَامِ دِينًا فَلَنْ يُقْبَلَ مِنْهُ وَهُوَ فِي الْآخِرَةِ مِنَ الْخَاسِرِينَ ﴿٨٥﴾﴾

"ಮತ್ತು ಯಾರು ಇಸ್ಲಾಂ ಅಲ್ಲದ ಬೇರೆ ಧರ್ಮವನ್ನು ಅರಸುತ್ತಾರೋ, ಅದು ಅವರಿಂದ ಎಂದಿಗೂ ಸ್ವೀಕರಿಸಲ್ಪಡುವುದಿಲ್ಲ, ಮತ್ತು ಪರಲೋಕದಲ್ಲಿ ಅವರು ನಷ್ಟ ಅನುಭವಿಸುವವರಲ್ಲಿ ಸೇರುತ್ತಾರೆ." [ಆಲು ಇಮ್ರಾನ್: 85]. ಸರ್ವಶಕ್ತನಾದ

ಅಲ್ಲಾಹು ಹೇಳುತ್ತಾನೆ:

﴿مَنْ يُطِعِ الرَّسُولَ فَقَدْ أَطَاعَ اللَّهَ...﴾

"ಯಾರು ಸಂದೇಶವಾಹಕರಿಗೆ ವಿಧೇಯರಾಗುತ್ತಾರೋ, ಅವರು ಖಂಡಿತವಾಗಿಯೂ ಅಲ್ಲಾಹನಿಗೆ ವಿಧೇಯರಾಗಿದ್ದಾರೆ." [ಅನ್ನಿಸಾ: 80].

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿قُلْ أَطِيعُوا اللَّهَ وَأَطِيعُوا الرَّسُولَ فَإِنْ تَوَلَّوْا فَإِنَّمَا عَلَيْهِ مَا حُمِّلَ وَعَلَيْكُمْ مَا حُمِّلْتُمْ وَإِنْ تُطِيعُوهُ تَهْتَدُوا...﴾

"ಹೇಳಿರಿ: ಅಲ್ಲಾಹನಿಗೆ ವಿಧೇಯರಾಗಿರಿ ಮತ್ತು ಸಂದೇಶವಾಹಕರಿಗೆ ವಿಧೇಯರಾಗಿರಿ. ಆದರೆ ನೀವು ವಿಮುಖರಾದರೆ, ಅವರ ಹೊಣೆಗಾರಿಕೆಯು ಅವರ ಮೇಲೆ ಹೊರಿಸಲಾದ ಕರ್ತವ್ಯವನ್ನು ನಿರ್ವಹಿಸುವುದು ಮಾತ್ರವಾಗಿದೆ ಮತ್ತು ನಿಮ್ಮ ಹೊಣೆಗಾರಿಕೆಯು ನಿಮ್ಮ ಮೇಲೆ ಹೊರಿಸಲಾದ ಕರ್ತವ್ಯವನ್ನು ನಿರ್ವಹಿಸುವುದು ಮಾತ್ರವಾಗಿದೆ. ನೀವು ಅವರಿಗೆ ವಿಧೇಯರಾದರೆ, ನೀವು ಸರಿಯಾದ ಮಾರ್ಗದರ್ಶನದಲ್ಲಿರುತ್ತೀರಿ." [ಅನ್ನೂರ್: 54]

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿إِنَّ الَّذِينَ كَفَرُوا مِنْ أَهْلِ الْكِتَابِ وَالْمُشْرِكِينَ فِي نَارِ جَهَنَّمَ خَالِدِينَ فِيهَا أُولَئِكَ هُمْ شَرُّ الْبَرِيَّةِ ﴿٦﴾﴾

"ಖಂಡಿತವಾಗಿಯೂ, ಗ್ರಂಥದ ಜನರಲ್ಲಿ (ಯಹೂದಿಗಳು ಮತ್ತು ಕ್ರಿಶ್ಚಿಯನ್ನರು) ಮತ್ತು

ಬಹುದೇವವಿಶ್ವಾಸಿಗಳಲ್ಲಿರುವ ಸತ್ಯನಿಷೇಧಿಗಳು ನರಕಾಗ್ನಿಯಲ್ಲಿ ಶಾಶ್ವತವಾಗಿರುತ್ತಾರೆ. ಅವರೇ ಸೃಷ್ಟಿಗಳಲ್ಲಿ ಅತ್ಯಂತ ಕೆಟ್ಟವರು."

[ಅಲ್-ಬಯ್ಯಿನ: 6].

ಮುಸ್ಲಿಂ ತಮ್ಮ ಸಹೀಹ್‌ನಲ್ಲಿ ವರದಿ ಮಾಡಿದ ಹದೀಸಿನಲ್ಲಿ ಅಲ್ಲಾಹನ ಸಂದೇಶವಾಹಕರು ﷺ ಹೇಳಿದರು:

«وَالَّذِي نَفْسِي بِيَدِهِ؛ لَا يَسْمَعُ بِي أَحَدٌ مِنْ هَذِهِ الْأُمَّةِ، يَهُودِيٌّ وَلَا نَصْرَانِيٌّ، ثُمَّ يَمُوتُ وَلَمْ يُؤْمِنْ بِالَّذِي أُرْسِلْتُ بِهِ؛ إِلَّا كَانَ مِنْ أَهْلِ النَّارِ».

"ಯಾರ ಕೈಯಲ್ಲಿ ನನ್ನ ಆತ್ಮವಿದೆಯೋ ಅವನ ಮೇಲೆ ಆಣೆಯಿಟ್ಟು ಹೇಳುತ್ತೇನೆ. ಈ ಸಮುದಾಯದಲ್ಲಿರುವ ಯಹೂದಿ ಅಥವಾ ಕ್ರಿಶ್ಚಿಯನ್ ಯಾರೇ ಆಗಲಿ, ಅವರು ನನ್ನ ಬಗ್ಗೆ ಕೇಳಿ, ನಂತರ ನನ್ನೊಂದಿಗೆ ಕಳುಹಿಸಲಾದ ಸಂದೇಶದಲ್ಲಿ ವಿಶ್ವಾಸವಿಡದೆ ಮರಣಹೊಂದಿದರೆ; ಅವರು ನರಕವಾಸಿಗಳಲ್ಲಿ ಸೇರುತ್ತಾರೆ."

ಇಸ್ಲಾಂ ಧರ್ಮವನ್ನು ಸ್ವೀಕರಿಸದವರ ಧರ್ಮವು ಅಸಿಂಧುವಾಗಿದೆ ಎಂದು ಪ್ರವಾದಿ (ಸ) ರವರು ತಮ್ಮ ಕ್ರಿಯೆ ಮತ್ತು ವಚನಗಳ ಮೂಲಕ ವಿವರಿಸಿದ್ದಾರೆ. ಇತರ ಸತ್ಯನಿಷೇಧಿಗಳೊಂದಿಗೆ ಹೋರಾಡಿದಂತೆ ಅವರು ಯಹೂದಿಗಳು ಮತ್ತು ಕ್ರಿಶ್ಚಿಯನ್ನರೊಂದಿಗೆ ಹೋರಾಡಿದ್ದಾರೆ. ಮತ್ತು ಅವರ ಪೈಕಿ ಜಿಝ್ಯಾ ನೀಡಿದವರಿಂದ ಅದನ್ನು ಸ್ವೀಕರಿಸಿದ್ದಾರೆ. ಇದೇಕೆಂದರೆ, ಉಳಿದವರಿಗೆ ಇಸ್ಲಾಂನ ಕರೆ

ತಲುಪುವುದನ್ನು ಅವರು ತಡೆಯದಿರುವುದಕ್ಕಾಗಿ, ಮತ್ತು ಅವರಲ್ಲಿ ಇಸ್ಲಾಂ ಧರ್ಮವನ್ನು ಸ್ವೀಕರಿಸಲು ಬಯಸುವವರು ತಮ್ಮ ಜನಾಂಗದವರ ಅಡೆತಡೆ, ನಿಷೇಧ ಅಥವಾ ಹತ್ಯೆಯ ಭಯವಿಲ್ಲದೆ ಇಸ್ಲಾಂ ಧರ್ಮವನ್ನು ಸ್ವೀಕರಿಸುವುದಕ್ಕಾಗಿ.

ಬುಖಾರಿ ಮತ್ತು ಮುಸ್ಲಿಂ, ಅಬೂ ಹುರೈರಾ (ರ) ರಿಂದ ವರದಿ. ಅವರು ಹೇಳಿದರು: ನಾವು ಮಸೀದಿಯಲ್ಲಿದ್ದಾಗ, ಅಲ್ಲಾಹನ ಸಂದೇಶವಾಹಕರು (ಸ) ಹೊರಬಂದು ಹೇಳಿದರು:

«انْطَلِقُوا إِلَى يَهُودَ، فَخَرَجْنَا مَعَهُ حَتَّى جِئْنَا بَيْتَ الْمِدْرَاسِ، فَقَامَ النَّبِيُّ ﷺ، فَنَادَاهُمْ فَقَالَ :يَا مَعْشَرَ يَهُودَ، أَسْلِمُوا تَسْلَمُوا، فَقَالُوا: قَدْ بَلَّغْتَ يَا أَبَا الْقَاسِمِ، فَقَالَ لَهُمْ رَسُولُ اللَّهِ ﷺ: ذَلِكَ أُرِيدُ، أَسْلِمُوا تَسْلَمُوا، فَقَالُوا: قَدْ بَلَّغْتَ يَا أَبَا الْقَاسِمِ، فَقَالَ لَهُمْ رَسُولُ اللَّهِ ﷺ: ذَلِكَ أُرِيدُ، ثُمَّ قَالَهَا الثَّالِثَةَ...».

ಯಹೂದಿಗಳ ಬಳಿಗೆ ಹೋಗಿ." ಆಗ ನಾವು ಅವರೊಂದಿಗೆ ಬೈತುಲ್-ಮಿದ್ರಾಸ್‌ಗೆ (ಯಹೂದಿ ಪಾಠಶಾಲೆ) ತಲುಪುವ ತನಕ ಹೊರಟೆವು. ಅಲ್ಲಿ ಪ್ರವಾದಿ (ಸ) ರವರು ಅವರನ್ನು ಕರೆದು ಹೇಳಿದರು: "ಓ ಯಹೂದಿಗಳ ಸಮೂಹವೇ, ಇಸ್ಲಾಂ ಸ್ವೀಕರಿಸಿ, ನೀವು ಸುರಕ್ಷಿತರಾಗಿರುತ್ತೀರಿ." ಅವರು ಹೇಳಿದರು: "ಓ ಅಬುಲ್ ಕಾಸಿಂ, ನೀವು ಸಂದೇಶವನ್ನು ತಲುಪಿಸಿದ್ದೀರಿ." ಆಗ ಅಲ್ಲಾಹನ ಸಂದೇಶವಾಹಕರು (ಸ) ಅವರಿಗೆ ಹೇಳಿದರು: "ನಾನು ಅದನ್ನೇ ಬಯಸುತ್ತೇನೆ, ಇಸ್ಲಾಂ ಸ್ವೀಕರಿಸಿ, ನೀವು

ಸುರಕ್ಷಿತರಾಗಿರುತ್ತೀರಿ." ಅವರು ಹೇಳಿದರು: "ಓ ಅಬುಲ್ ಕಾಸಿಂ, ನೀವು ಸಂದೇಶವನ್ನು ತಲುಪಿಸಿದ್ದೀರಿ." ಆಗ ಅಲ್ಲಾಹನ ಸಂದೇಶವಾಹಕರು (ಸ) ಅವರಿಗೆ ಹೇಳಿದರು: "ನಾನು ಅದನ್ನೇ ಬಯಸುತ್ತೇನೆ." ನಂತರ ಅದನ್ನು ಮೂರನೇ ಬಾರಿಗೆ ಹೇಳಿದರು... ಹದೀಸ್.

ಇದರ ಅರ್ಥವೇನೆಂದರೆ, ಪ್ರವಾದಿ (ಸ) ರವರು ಯಹೂದಿ ಧರ್ಮದವರ ಬಳಿಗೆ ಅವರ ಮದ್ರಸಾ (ಪಾಠಶಾಲೆ) ಗೆ ಹೋಗಿ, ಅವರನ್ನು ಇಸ್ಲಾಂಗೆ ಆಹ್ವಾನಿಸಿದರು, ಮತ್ತು ಅವರಿಗೆ ಹೇಳಿದರು: "ಇಸ್ಲಾಂ ಸ್ವೀಕರಿಸಿ, ನೀವು ಸುರಕ್ಷಿತರಾಗಿರುತ್ತೀರಿ". ಅವರು ಅದನ್ನು (ಹಲವು ಬಾರಿ) ಪುನರಾವರ್ತಿಸಿದರು.

ಅದೇ ರೀತಿ, ಅವರು ಹಿರ್ಕಲ್‌ಗೆ (ಹಿರಾಕ್ಲಿಯಸ್) ಪತ್ರವನ್ನು ಕಳುಹಿಸಿ ಅವನನ್ನು ಇಸ್ಲಾಂಗೆ ಆಹ್ವಾನಿಸಿದರು. ಅವನು ಅದನ್ನು ನಿಷೇಧಿಸಿದರೆ, ಅವನ ನಿಷೇಧದಿಂದಾಗಿ ಇಸ್ಲಾಂ ಅನ್ನು ಸ್ವೀಕರಿಸದವರ ಪಾಪವು ಕೂಡ ಅವನ ಮೇಲೆ ಇರುತ್ತದೆ ಎಂದು ತಿಳಿಸಿದರು. ಬುಖಾರಿ ಮತ್ತು ಮುಸ್ಲಿಂ ತಮ್ಮ ಸಹೀಹ್‌ಗಳಲ್ಲಿ ವರದಿ ಮಾಡಿದಂತೆ, ಹಿರ್ಕಲ್ ಅಲ್ಲಾಹನ ಸಂದೇಶವಾಹಕರ (ಸ) ಪತ್ರವನ್ನು ತರಿಸಿಕೊಂಡು ಓದಿದನು, ಅದರಲ್ಲಿ ಹೀಗೆ ಬರೆಯಲಾಗಿತ್ತು:

«بِسْمِ اللَّهِ الرَّحْمَنِ الرَّحِيمِ، مِنْ مُحَمَّدٍ رَسُولِ اللَّهِ إِلَى هِرَقْلَ عَظِيمِ الرُّومِ، سَلَامٌ عَلَى مَنِ اتَّبَعَ الْهُدَى، أَمَّا بَعْدُ: فَإِنِّي أَدْعُوكَ بِدِعَايَةِ الْإِسْلَامِ، أَسْلِمْ تَسْلَمْ، وَأَسْلِمْ يُؤْتِكَ

اللَّهُ أَجْرَكَ مَرَّتَيْنِ، فَإِنْ تَوَلَّيْتَ، فَإِنَّ عَلَيْكَ إِثْمَ الْأَرِيسِيِّينَ وَ

"ಪರಮ ದಯಾಮಯನೂ, ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ. ಅಲ್ಲಾಹನ ಸಂದೇಶವಾಹಕ ಮುಹಮ್ಮದ್‌ರಿಂದ ರೋಮ್‌ನ ಮಹಾನ್ ಚಕ್ರವರ್ತಿ ಹಿರ್ಕಲ್‌ಗೆ. ಸನ್ಮಾರ್ಗವನ್ನು ಅನುಸರಿಸುವವರ ಮೇಲೆ ಶಾಂತಿಯಿರಲಿ. ಇನ್ನು ಮುಂದಕ್ಕೆ ಹೇಳುವುದೇನೆಂದರೆ, ನಾನು ನಿಮ್ಮನ್ನು ಇಸ್ಲಾಂನ ಕರೆಯೊಂದಿಗೆ ಆಹ್ವಾನಿಸುತ್ತೇನೆ. ಇಸ್ಲಾಂ ಸ್ವೀಕರಿಸಿರಿ, ನೀವು ಸುರಕ್ಷಿತರಾಗಿರುತ್ತೀರಿ. ಇಸ್ಲಾಂ ಸ್ವೀಕರಿಸಿರಿ, ಅಲ್ಲಾಹು ನಿಮಗೆ ನಿಮ್ಮ ಪ್ರತಿಫಲವನ್ನು ಎರಡು ಬಾರಿ ನೀಡುತ್ತಾನೆ. ಆದರೆ ನೀವು ವಿಮುಖರಾದರೆ, ನಿಮ್ಮ ಅನುಯಾಯಿಗಳ ಪಾಪವು ನಿಮ್ಮ ಮೇಲಿರುತ್ತದೆ.

﴿يَٰٓأَهۡلَ ٱلۡكِتَٰبِ تَعَالَوۡاْ إِلَىٰ كَلِمَةٖ سَوَآءِۭ بَيۡنَنَا وَبَيۡنَكُمۡ أَلَّا نَعۡبُدَ إِلَّا ٱللَّهَ وَلَا نُشۡرِكَ بِهِۦ شَيۡـٔٗا وَلَا يَتَّخِذَ بَعۡضُنَا بَعۡضًا أَرۡبَابٗا مِّن دُونِ ٱللَّهِۚ فَإِن تَوَلَّوۡاْ فَقُولُواْ ٱشۡهَدُواْ بِأَنَّا مُسۡلِمُونَ ٦٤﴾

"ಓ ಗ್ರಂಥದ ಜನರೇ, ನಮ್ಮ ಮತ್ತು ನಿಮ್ಮ ನಡುವೆ ಸಮಾನವಾದ ಒಂದು ವಚನಕ್ಕೆ ಬನ್ನಿರಿ. (ಆ ವಚನವೇನೆಂದರೆ) ನಾವು ಅಲ್ಲಾಹನ ಹೊರತು ಬೇರೆ ಯಾರನ್ನೂ ಆರಾಧಿಸಬಾರದು, ಮತ್ತು ನಾವು ಅವನೊಂದಿಗೆ ಯಾವುದೇ ಸಹಭಾಗಿಗಳನ್ನು ಮಾಡಿಕೊಳ್ಳಬಾರದು, ಮತ್ತು ನಮ್ಮಲ್ಲಿ ಯಾರೂ ಅಲ್ಲಾಹನ ಹೊರತಾಗಿ ಇತರರನ್ನು ಪ್ರಭುಗಳಾಗಿ

ಸ್ವೀಕರಿಸಬಾರದು. ನಂತರ, ಅವರೇನಾದರೂ ವಿಮುಖರಾದರೆ, ಹೇಳಿರಿ: ನಾವು ಮುಸ್ಲಿಮರು ಎಂಬುದಕ್ಕೆ (ನೀವು) ಸಾಕ್ಷಿಯಾಗಿರಿ."

[ಆಲು ಇಮ್ರಾನ್: 64].

ನಂತರ ಅವರು ವಿಮುಖರಾಗಿ ಇಸ್ಲಾಂ ಸ್ವೀಕರಿಸಲು ನಿರಾಕರಿಸಿದಾಗ, ಪ್ರವಾದಿ (ಸ) ರವರು ಮತ್ತು ಅವರ ಸಹಚರರು (ಸಹಾಬಿಗಳು) ಅವರೊಂದಿಗೆ ಯುದ್ಧ ಮಾಡಿದರು ಮತ್ತು ಅವರ ಮೇಲೆ ಜಿಝ್ಯಾವನ್ನು ವಿಧಿಸಿದರು.

ಅವರ ದುರ್ಮಾರ್ಗವನ್ನು ಮತ್ತು ಮುಹಮ್ಮದ್ (ಸ) ರವರ ಧರ್ಮದ ಮೂಲಕ ಅವರ ಧರ್ಮಗಳು ರದ್ದುಗೊಂಡ ಬಳಿಕ, ಅವರು ಅನುಸರಿಸುತ್ತಿರುವವರ ಧರ್ಮವು ಸುಳ್ಳಾಗಿದೆ ಎಂಬುದನ್ನು ಒತ್ತಿಹೇಳುವುದಕ್ಕಾಗಿ, ಅಲ್ಲಾಹು ನೇರವಾದ, ಸರಿಯಾದ, ಸ್ವೀಕಾರಾರ್ಹವಾದ ಮಾರ್ಗಕ್ಕೆ (ಇಸ್ಲಾಂ ಧರ್ಮಕ್ಕೆ) ಮಾರ್ಗದರ್ಶನ ನೀಡುವಂತೆ ಪ್ರತಿದಿನ, ಪ್ರತಿ ನಮಾಝಿನಲ್ಲಿ ಮತ್ತು ಪ್ರತಿ ರಕಅತ್‌ನಲ್ಲಿ ಬೇಡಿಕೊಳ್ಳುವಂತೆ ಮುಸ್ಲಿಮರಿಗೆ ಆಜ್ಞಾಪಿಸಿದ್ದಾನೆ. ಹಾಗೆಯೇ ಅವನ ಕೋಪಕ್ಕೆ ಗುರಿಯಾದವರ (ಯಹೂದಿಗಳು ಮತ್ತು ಅವರಂತೆಯೇ ತಾವು ತಪ್ಪುದಾರಿಯಲ್ಲಿದ್ದೇವೆಂದು ತಿಳಿದೂ ಅದರ ಮೇಲೆ ಹಠ ಹಿಡಿಯುವವರು) ಮಾರ್ಗದಿಂದ ದೂರವಿರಿಸುವಂತೆ, ಹಾಗೂ ದಾರಿತಪ್ಪಿದವರ (ಜ್ಞಾನವಿಲ್ಲದೆ ಆರಾಧಿಸುವವರು, ಮತ್ತು ತಾವು

ಸನ್ಮಾರ್ಗದಲ್ಲಿದ್ದೇವೆಂದು ವಾದಿಸುವವರು—ವಾಸ್ತವವಾಗಿ ಅವರು ದಾರಿತಪ್ಪಿದ ಮಾರ್ಗದಲ್ಲಿದ್ದಾರೆ. ಇವರು ಯಾರೆಂದರೆ, ಕ್ರಿಶ್ಚಿಯನ್ನರು, ಮತ್ತು ಇತರ ಜನಾಂಗಗಳಲ್ಲಿ ಸೇರಿದ ಅಜ್ಞಾನ ಮತ್ತು ದುರ್ಮಾರ್ಗದ ಆಧಾರದಲ್ಲಿ ಆರಾಧಿಸುವವರು) ಮಾರ್ಗದಿಂದ ದೂರವಿರಿಸುವಂತೆ (ಬೇಡಿಕೊಳ್ಳಬೇಕೆಂದು ಆದೇಶಿಸಿದ್ದಾನೆ). ಇದೆಲ್ಲವೂ, ಇಸ್ಲಾಂ ಹೊರತುಪಡಿಸಿ ಇತರೆಲ್ಲಾ ಧರ್ಮಗಳು ಸುಳ್ಳು ಎಂದು ಮತ್ತು ಇಸ್ಲಾಂ ಹೊರತುಪಡಿಸಿ ಇತರ ಧರ್ಮಗಳ ಪ್ರಕಾರ ಅಲ್ಲಾಹನನ್ನು ಆರಾಧಿಸುವ ಪ್ರತಿಯೊಬ್ಬರೂ ದಾರಿತಪ್ಪಿದವರೆಂದು ಮುಸ್ಲಿಮನಿಗೆ ಖಚಿತವಾಗಿ ತಿಳಿಯುವುದಕ್ಕಾಗಿದೆ. ಯಾರು ಇದನ್ನು ನಂಬುವುದಿಲ್ಲವೋ ಅವನು ಮುಸ್ಲಿಮರಲ್ಲಿ ಸೇರಿದವನಲ್ಲ. ಈ ವಿಷಯದಲ್ಲಿ ಕುರ್‌ಆನ್ ಮತ್ತು ಸುನ್ನತ್‌ನಲ್ಲಿ ಅನೇಕ ಪುರಾವೆಗಳಿವೆ.

ಆದ್ದರಿಂದ, ಪ್ರಾಮಾಣಿಕ ಪಶ್ಚಾತ್ತಾಪಕ್ಕೆ ಮುಂದಾಗುವುದು, ಮತ್ತು ತನ್ನ ಪಶ್ಚಾತ್ತಾಪವನ್ನು ಘೋಷಿಸುವ ಲೇಖನವನ್ನು ಬರೆಯುವುದು ಆ ಲೇಖನದ ಲೇಖಕರಾದ ಅಬ್ದುಲ್ ಫತ್ತಾಹ್‌ರಿಗೆ ಕಡ್ಡಾಯವಾಗಿದೆ. ಯಾರು ಅಲ್ಲಾಹನ ಬಳಿ ಪ್ರಾಮಾಣಿಕವಾಗಿ ಪಶ್ಚಾತ್ತಾಪ ಪಡುತ್ತಾರೋ; ಅಲ್ಲಾಹು ಅವನ ಪಶ್ಚಾತ್ತಾಪವನ್ನು ಸ್ವೀಕರಿಸುತ್ತಾನೆ; ಅಲ್ಲಾಹು ಹೇಳುತ್ತಾನೆ:

﴿...وَتُوبُوٓاْ إِلَى ٱللَّهِ جَمِيعًا أَيُّهَ ٱلۡمُؤۡمِنُونَ لَعَلَّكُمۡ تُفۡلِحُونَ﴾

ಓ ಸತ್ಯವಿಶ್ವಾಸಿಗಳೇ! ನೀವೆಲ್ಲರೂ ಅಲ್ಲಾಹನ ಬಳಿಗೆ ಪಶ್ಚಾತ್ತಾಪಪಟ್ಟು ಮರಳಿರಿ. ನೀವು ಯಶಸ್ವಿಯಾಗುವುದಕ್ಕಾಗಿ. [ಅನ್ನೂರ್: 31]

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿وَٱلَّذِينَ لَا يَدۡعُونَ مَعَ ٱللَّهِ إِلَٰهًا ءَاخَرَ وَلَا يَقۡتُلُونَ ٱلنَّفۡسَ ٱلَّتِي حَرَّمَ ٱللَّهُ إِلَّا بِٱلۡحَقِّ وَلَا يَزۡنُونَۚ وَمَن يَفۡعَلۡ ذَٰلِكَ يَلۡقَ أَثَامًا ۝٦٨ يُضَٰعَفۡ لَهُ ٱلۡعَذَابُ يَوۡمَ ٱلۡقِيَٰمَةِ وَيَخۡلُدۡ فِيهِۦ مُهَانًا ۝٦٩ إِلَّا مَن تَابَ وَءَامَنَ وَعَمِلَ عَمَلًا صَٰلِحًا فَأُوْلَٰٓئِكَ يُبَدِّلُ ٱللَّهُ سَيِّـَٔاتِهِمۡ حَسَنَٰتٖۗ وَكَانَ ٱللَّهُ غَفُورًا رَّحِيمًا ۝٧٠﴾

ಅವರು ಅಲ್ಲಾಹನ ಜೊತೆಗೆ ಬೇರೆ ದೇವರುಗಳನ್ನು ಕರೆದು ಪ್ರಾರ್ಥಿಸುವುದಿಲ್ಲ, ಕಾನೂನುಬದ್ಧ ರೀತಿಯಲ್ಲೇ ಹೊರತು ಅಲ್ಲಾಹು (ಕೊಲ್ಲುವುದನ್ನು) ನಿಷೇಧಿಸಿದ ಜೀವವನ್ನು ಕೊಲ್ಲುವುದಿಲ್ಲ ಮತ್ತು ವ್ಯಭಿಚಾರ ಮಾಡುವುದಿಲ್ಲ. ಯಾರು ಇವುಗಳನ್ನು ಮಾಡುತ್ತಾನೋ ಅವನು ಶಿಕ್ಷೆಯನ್ನು ಪಡೆಯುವನು.

ಪುನರುತ್ಥಾನ ದಿನದಂದು ಅವನಿಗೆ ಇಮ್ಮಡಿ ಶಿಕ್ಷೆ ನೀಡಲಾಗುವುದು. ಅವನು ಅವಮಾನವನ್ನು ಸಹಿಸುತ್ತಾ ಸದಾಕಾಲ ಅದರಲ್ಲಿ ವಾಸಿಸುವನು.

ಆದರೆ ಪಶ್ಚಾತ್ತಾಪಪಟ್ಟವರು, ಸತ್ಯವಿಶ್ವಾಸಿಗಳಾದವರು ಮತ್ತು ಸತ್ಕರ್ಮವೆಸಗಿದವರು ಇದಕ್ಕೆ ಹೊರತಾಗಿದ್ದಾರೆ. ಅಲ್ಲಾಹು ಅವರ ದುಷ್ಕೃತ್ಯಗಳನ್ನು ಸತ್ಕರ್ಮಗಳಾಗಿ ಬದಲಾಯಿಸುವನು. ಅಲ್ಲಾಹು ಕ್ಷಮಿಸುವವನು ಮತ್ತು ದಯೆ ತೋರುವವನಾಗಿದ್ದಾನೆ.70 [ಅಲ್-

ಫುರ್ಕಾನ್: 68-70]. ಪ್ರವಾದಿ(ಸ) ರವರು ಹೇಳುತ್ತಾರೆ:

«الإِسْلَامُ يَهْدِمُ مَا كَانَ قَبْلَهُ، وَالتَّوبَةُ تَهْدِمُ مَا كَانَ قَبْلَهَا».

"ಇಸ್ಲಾಂ ಅದರ ಹಿಂದಿನದನ್ನು ನಾಶಪಡಿಸುತ್ತದೆ, ಮತ್ತು ಪಶ್ಚಾತ್ತಾಪವು ಅದರ ಹಿಂದಿನದನ್ನು ನಾಶಪಡಿಸುತ್ತದೆ." ಮತ್ತು ಪ್ರವಾದಿ (ﷺ) ರವರು ಹೇಳಿದರು:

«التَّائِبُ مِنَ الذَّنْبِ كَمَنْ لَا ذَنْبَ لَهُ».

"ಪಾಪದಿಂದ ಪಶ್ಚಾತ್ತಾಪ ಪಡುವವನು ಪಾಪವಿಲ್ಲದವನಂತೆ ಆಗುತ್ತಾನೆ."

ಈ ಅರ್ಥದಲ್ಲಿ ಇನ್ನೂ ಅನೇಕ ವಚನಗಳು ಮತ್ತು ಹದೀಸ್‌ಗಳಿವೆ.

ನಮಗೆ ಸತ್ಯವನ್ನು ಸತ್ಯವಾಗಿ ತೋರಿಸಲು, ಮತ್ತು ಅದನ್ನು ಅನುಸರಿಸುವ ಸಾಮರ್ಥ್ಯವನ್ನು ನೀಡಲು, ಅಸತ್ಯವನ್ನು ಅಸತ್ಯವಾಗಿ ತೋರಿಸಲು, ಮತ್ತು ಅದರಿಂದ ದೂರವಿರುವ ಸಾಮರ್ಥ್ಯವನ್ನು ನೀಡಲು ನಾನು ಅಲ್ಲಾಹನಲ್ಲಿ ಪ್ರಾರ್ಥಿಸುತ್ತೇನೆ. ಅವನು ನಮಗೆ, ಲೇಖಕರಾದ ಅಬ್ದುಲ್ ಫತ್ತಾಹ್ ರಿಗೆ ಮತ್ತು ಎಲ್ಲಾ ಮುಸ್ಲಿಮರಿಗೆ ಪ್ರಾಮಾಣಿಕ ಪಶ್ಚಾತ್ತಾಪ ಮಾಡುವ ಅನುಗ್ರಹವನ್ನು ದಯಪಾಲಿಸಲಿ. ಅವನು ನಮ್ಮೆಲ್ಲರನ್ನೂ ದಾರಿತಪ್ಪಿಸುವ ಪರೀಕ್ಷೆಗಳಿಂದ ಮತ್ತು ಮೋಹಗಳಿಗೆ ಹಾಗೂ ಶೈತಾನನಿಗೆ ವಿಧೇಯರಾಗುವುದರಿಂದ ರಕ್ಷಿಸಲಿ. ಖಂಡಿತವಾಗಿಯೂ ಅವನು ಅದಕ್ಕೆ

ಸಮರ್ಥನಾಗಿದ್ದಾನೆ.

ನಮ್ಮ ಪ್ರವಾದಿ ಮುಹಮ್ಮದ್(ಸ) ರವರ ಮೇಲೆ, ಅವರ ಕುಟುಂಬದ ಮೇಲೆ, ಅವರ ಸಹಾಬಾಗಳ ಮೇಲೆ ಮತ್ತು ಪ್ರತಿಫಲ ದಿನದ ತನಕ ಅವರನ್ನು ಅತ್ಯುತ್ತಮವಾಗಿ ಅನುಸರಿಸಿದವರ ಮೇಲೆ ಅಲ್ಲಾಹನ ಸಲಾತ್ ಮತ್ತು ಸಲಾಂ ಇರಲಿ.

❊❊❊

kn٣٩٧v٤,٠ - ١٦/٠٢/٢٠٢٦

رئاسة الشؤون الدينية
بالمسجد الحرام والمسجد النبوي

رسالة الحرمين

# Message of The Two Holy Mosques

Guidance content for the visitors of the Holy Mosque and the Prophet's Mosque in languages

978-603-517-274-5